MR. DEPUTY SPEAKER.—That is outside the scope of the main Question.

Fish Farm Scheme at Bhadravathi

564. Sri K. H. HANUME GOWDA (Hassan).—

Will the Minister of State for Fisheries be pleased to state.—

(*a*) the amount spent so far for Bhandra Fish Farm Scheme ;

(*b*) the number of Fishlets produced during the last three years and their total value ;

(*c*) the ranks of the Officers of Fisheries Department who are working under this Scheme and the amount spent towards their salary every year ;

(*d*) when the State will get full benefit of the Fish Farm and its Qnantum ?

Sri K. T. RATHOD (Minister of State for Fisheries).—

(*a*) Rs. 4.23 lakhs have been spent so far from the inception of Bhandra Fish Farm Scheme *i.e.* from 1965-66.

(*b*) 40500 Fishlets were produced during 1969-70 and its value was Rs. 4050; 1,18,500 Fishlets were produced during 1970-71 and its value was Rs. 11,850; 4,24,000 Fishlets were produced during 1971-72 and its value was Rs. 23,500.

(*c*) Only 3 Class III Officials were working under this scheme during 1965-66. The Staff was increased from 24-2-1972 and now One Class I Officer and 5 Class III Officials are working and an amount of Rs 31,800 is being spent towards their salary per year.

(*d*) Under the present financial position it cannot be said as to when the full benefit would be derived from this Fish Farm. Because this depends upon the amount made available for this scheme every year. After completion of this scheme, there will be an expenditure of about Rs. 10 lakhs per year and 5 crores of fishlets can be produced every year worth of Rs. 50 lakhs (estimate).

ಶ್ರೀ ಕೆ. ಎಚ್. ಹನುಮೇಗೌಡ.—ಈ ಸ್ಕೀಮಿನ ಅಂದಾಜು ಮೊಬಲಗು ಎಷ್ಟು ? ಕಳೆದ 4-5 ವರ್ಷಗಳಿಂದ ಎಷ್ಟು ಖರ್ಚಾಗಿದೆ ?

† ಕೆ. ಟಿ. ರಾಥೋಡ್.—ಮಾನ್ಯ ಸದಸ್ಯರಿಗೆ ಗೊತ್ತಿರುವಂತಹ ಈ ಸ್ಕೀಮಿನ ಅಂದಾಜು ಸುಮಾರು ಒಂದುವರೆ ಕೋಟಿಯಿಂದ ಎರಡು ಕೋಟಿ ರೂಪಾಯಿಗಳವರೆಗೆ ಇದೆ. ಇಷ್ಟರವರೆಗೆ ಎಷ್ಟು ಖರ್ಚಾಗಿದೆ ಎಂಬುದನ್ನು ಪ್ರಿಂಟೆಂಡ್ ಉತ್ತರದಲ್ಲಿ ಕೊಟ್ಟಿದೆ. ಈ ಸ್ಕೀಮನ್ನು ಪೂರ್ತಿಯಾಗಿ ಕಾರ್ಯಗತ ಮಾಡುವುದನ್ನು ಇಂತಿಷ್ಟೇ ವೇಳೆಯಲ್ಲಿ ಎಂದು ಹೇಳುವುದಕ್ಕಾಗುವುದಿಲ್ಲ ಏಕೆಂದರೆ ನಮಗೆ ಲಭ್ಯವಾಗುವಂತಹ ಹಣದ ಮೇಲೆ ಈ ಸ್ಕೀಮಿನ ಪ್ರಗತಿ ಅವಲಂಬಿಸಿಕೊಂಡಿದೆ.

ಶ್ರೀ ಕೆ. ಎಚ್. ಹನುಮೇಗೌಡ.—ದೇಶದಲ್ಲಿ ಅವಶ್ಯವಿರುವಷ್ಟು ಮಾನಿನ ಮರಿಗಳನ್ನು ಒದಗಿಸುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತಿದ್ದೀರಿ ಮತ್ತು ಪಶ್ಚಿಮ ಬಂಗಾಳದಿಂದ ಸಹ ತರಿಸುತ್ತಿದ್ದೀರಿ. ಇದಕ್ಕಾಗಿ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೀರಿ. ಅದ್ದರಿಂದ ಈ ಸೀಮೆಯನ್ನು ಆದಷ್ಟು ಜಾಗ್ರತೆಯಾಗಿ ಪೂರ್ತಿ ಮಾಡುವುದಕ್ಕೆ ಏನು ತೊಂದರೆ ಇದೆ ?

ಶ್ರೀ ಕೆ. ಟಿ. ರಾಥೋಡ್.—ಇದಕ್ಕೆ ಮುಖ್ಯವಾದಂತಹ ಕಾರಣ ಹಣದ ಅಭಾವ. ಈ ಸಮಸ್ಯೆಯನ್ನು ಆದಷ್ಟು ಜಾಗ್ರತೆ ಬಗೆಹರಿಸುವ ನಲುವಾಗಿ ನಾಲ್ಕನೆಯ ಯೋಜನೆಯಲ್ಲಿ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಮತ್ತು ಮುಂದಿನ ಪಂಚವಾರ್ಷಿಕ ಯೋಜನೆಯಲ್ಲಿ ಎರಡೂವರೆ ಕೋಟಿಯಷ್ಟು ಹಣವನ್ನು ತೊಡಗಿಸಬೇಕೆಂದು ಅಂದಾಜು ಮಾಡಲಾಗಿದೆ. ಅಷ್ಟು ಹಣ ಲಭ್ಯವಾದರೆ 5ನೇ ಯೋಜನೆ ಮುಗಿಯುವುದರೊಳಗೆ ನಮಗೆ ಬೇಕಾಗುವಷ್ಟು ಮಾನಿನ ಮರಿಗಳನ್ನು ಪಡೆಯುವುದಕ್ಕೆ ಸಾಧ್ಯವಾಗುತ್ತದೆ ಎಂದು ಅಂದಾಜು ಮಾಡಲಾಗಿದೆ.

ಶ್ರೀ ಎಸ್. ಬಂಗಾರಪ್ಪ.—ಈ ಫಾರ್ಮಿನಲ್ಲಿ ಉತ್ಪಾದನೆಯಾಗತಕ್ಕ ಮಾನಿನ ಮರಿಗಳು ನಮ್ಮ ರಾಜ್ಯದಲ್ಲಿರತಕ್ಕಂತಹ ಎಲ್ಲಾ ಕೆರೆಗಳಿಗೆ ಮತ್ತು ಇತರ ಫಾರ್ಮುಗಳಿಗೆ ಸಾಕಾಗುವಷ್ಟು ಸಿಗುತ್ತವೆಯೇ ಮತ್ತು ಹಾಗಿದ್ದರೆ ಅದು ಎಷ್ಟು ವರ್ಷಗಳಲ್ಲಿ ಪೂರೈಸಲು ಸಾಧ್ಯವಾಗುತ್ತದೆ ?

ಶ್ರೀ ಕೆ. ಟಿ. ರಾಥೋಡ್.—ನಮ್ಮ ಪ್ರಾಂತ್ಯಕ್ಕೆ ಬೇಕಾಗಿರತಕ್ಕದ್ದು 15 ರಿಂದ 20 ಕೋಟಿಯಷ್ಟು ಮಾನಿನ ಮರಿಗಳು. ಸದ್ಯದ ನಮ್ಮ ಯೋಜನೆಗಳ ಪ್ರಕಾರ ನಮಗೆ ಲಭ್ಯವಾಗತಕ್ಕಂತಹ ಮೀನಿನ ಮರಿಗಳು 3 ಕೋಟಿ ಮಾತ್ರ. ಅದಕ್ಕೆ ದೊಡ್ಡ ದೊಡ್ಡ ಫಾರ್ಮಿನಲ್ಲಿ ಇಂತಹ ಮಾನಿನ ಮರಿಗಳನ್ನು ಸಾಕುವುದಕ್ಕೆ ಕಾರ್ಯಕ್ರಮ ಹಾಕಿಕೊಂಡರೆ ಮುಂದಿನ ಪಂಚವಾರ್ಷಿಕ ಯೋಜನೆಯಲ್ಲಿ ಅದನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ.

Shifting of Defence Establishments

567. Sri K. R. SRINIVASULU NAYUDU (Shanthinagar).—

Will the Chief Minister be pleased to state.—

whether there is any proposal before Government to recommend to the Centre to shift the various Defence Establishments and Military barracks situated within the Municipal limits of the Bangalore City Corporation to other areas like Jalahalli, Agaram Hunusemanahalli, etc. ?

Sri D. DEVARAJ URS (Chief Minister).— No.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ನನ್ನ ಪ್ರಶ್ನೆಗೆ ಉತ್ತರವಾಗಿ ಇಲ್ಲವೆಂದು ಹೇಳಿದ್ದೀರಿ. ನನ್ನ ಅನುಭವದಲ್ಲಿ ಹೇಳುವುದಾದರೆ ಈ ಮಿಲಿಟರಿ ಎಸ್ಟಾಬ್ಲಿಸ್‌ಮೆಂಟ್‌ಗಳು ನಿಟ ಮಧ್ಯ ಇರುವುದರಿಂದ ಕಂಜೋನ್‌ಮೆಂಟ್ ಮುಂತಾದ ಭಾಗಗಳ ಬೆಳವಣಿಗೆಗೆ ಕುಂಠಿತವಾಗುತ್ತಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

† ಶ್ರೀ ಡಿ. ದೇವರಾಜ ಅರಸ್.—ಅವರು ಕೇಳಿರುವ ಪ್ರಕಾರ ಪ್ರೊಪೋಸಲ್ಸ್ ಏನೂ ಇಲ್ಲವೆಂದು ಹೇಳಿದೆ. ನಾವು ಅವರ ಹತ್ತಿರ ಮಾತನಾಡಿ ಕೇಳುತ್ತಿದ್ದೇವೆ. ಅವರು ಒಂದೆರಡು ಕಡೆ ಒಪ್ಪಿದ್ದಾರೆ. ಅದನ್ನು ಬಿಟ್ಟುಕೊಡುತೆ ವೆಂದು ಹೇಳಿದ್ದಾರೆ. ಬಾಕಿ ಉಳಿದವುಗಳ ಬಗ್ಗೆ ಏನೂ ಹೇಳಲ್ಲ.

ಶ್ರೀ ಕೆ. ಆರ್ ಶ್ರೀನಿವಾಸಲು ನಾಯ್ಡು.—ಅನೇಕ ಕಡೆ ಬರೇ ಮೈದಾನಗಳು ಇವೆ. ಹಿಂದೆ ಬ್ರಿಟಿಷರ ಕಾಲದಲ್ಲಿ ಈ ರೀತಿ ಮಿಲಿಟರಿ ನೆಲೆಗಳು ಮಧ್ಯದಲ್ಲಿ ಇರಬೇಕಾಗಿತ್ತು. ಆದರೆ ಈಗ